‘ಆದ್ರೆ ಇವತ್ತು ಬಂದ ಹಾಗೆ ಇಲ್ಲ. ನೀನು ಆ ವಿಷ್ಯಾನ ನನಗೆ ಈಗ ಹೇಳಿಲ್ಲ’ ಅನುಮಾನ ಪ್ರಕಟಿಸಿದ ಅಧಿಕಾರಿ.

‘ಹೌದು ಸಾರ್, ನೀವು ಹೇಳೋದು ಸರಿ. ಇವತ್ತು ಅವನು ಬಂದಿಲ್ಲ. ನಂಗೂ ಆಶ್ಚರ್ಯ ಆಗೋಯ್ತು. ಇಲ್ಲಾಂದ್ರೆ ಅವನು ಇಲ್ಲಿಗೆ ಬರದೆ ಹೋಗೋದಿಲ್ಲ’

ಇನ್ಸ್‌ಪೆಕ್ಟರ್‌ಗೆ ಈಗ ಅನಿಸಿತು, ಪಾಂಬು ಬಹಳ ಆತುರದಲ್ಲಿದ್ದಾನೆ! ಆ ಆತುರ ಯಾಕಾಗಿ?

* * *

ಇನ್ಸ್‌ಪೆಕ್ಟರ್ ರಾಜಧಾನಿ ಪೆಟ್ಟಿಗೆ ಅಂಗಡಿಯ ಮಾಲೀಕನ ಮಾತುಗಳನ್ನು ಕೇಳಿದ ಮೇಲೆ ಆಲೋಚನೆಗೊಳಗಾದ. ಪಾಂಬು ತನ್ನಿಂದ ಏನನ್ನೋ ಮುಚ್ಚಿಡುತ್ತಿದ್ದಾನೆ. ಅದನ್ನು ತಾನು ತಿಳಿದುಕೊಳ್ಳಬೇಕು.

ಜೀಪನ್ನು ಅಲ್ಲಿಯೇ ಬಿಟ್ಟು ತನ್ನ ವಾಕಿ ಟಾಕಿಯ ಜೊತೆಗೆ ಮುಂದೆ ನಡೆದ. ಮತ್ತೇನೋ ನೆನಪಾಗಿ ಹಿಂದಕ್ಕೆ ಬಂದವನೆ ಅಂಗಡಿಯವನನ್ನು ನೋಡಿದ. ಅವನು ಆಗಲೇ ಯಾರೊಂದಿಗೋ ಮಾತನಾಡುತ್ತಿರುವುದು ಕಂಡಿತು. ಈತ ಸಾಮಾನ್ಯನಲ್ಲ. ತಾನು ಅವನಿಗೆ ಹಾಕಿದ ಪ್ರಶ್ನೆಗಳನ್ನೆಲ್ಲಾ ಈಗ ಬೇರೆಯವರೊಂದಿಗೆ ಹೇಳಿಕೊಳ್ಳುತ್ತಿದ್ದಾನೆ. ಇನ್ನು ಆ ವಿಷಯ ಪಾಂಬುವನ್ನು ತಲುಪಲು ಹೆಚ್ಚು ಸಮಯ ಬೇಕಾಗಿಲ್ಲ. ಅದಕ್ಕಾಗಿ ಅಂಗಡಿಯಾತನನ್ನು ಎಚ್ಚರಿಸಬೇಕಿತ್ತು.

‘ನೋಡು’ ಇನ್ಸ್‌ಪೆಕ್ಟರ್ ಏನನ್ನೋ ಹೇಳಬೇಕೆನ್ನುವಷ್ಟರಲ್ಲಿ ಆತ ಬೆದರಿದವರಂತೆ ಅಂಗಡಿಯಿಂದ ಕೈ ಮುಗಿಯುತ್ತಾ ನಡು ಬಗ್ಗಿಸಿಕೊಂಡು ಹೊರಗೆ ಬಂದ.ರಾಜಧಾನಿಯನ್ನು ನೋಡುತ್ತಲೇ ಅವನ ಜೊತೆಗೆ ಮಾತನಾಡುತ್ತಿದ್ದ ವ್ಯಕ್ತಿ ಹಿಂಬದಿಯಿಂದ ಹೊರಟು ಹೋದ.

‘ನೋಡು, ನಾನು ನಿನ್ನಲ್ಲಿ ಕೇಳಿದ ಪ್ರಶ್ನೆಗಳನ್ನು ಬೇರಯವರ ಜೊತೆಗೆ ಮಾತಾಡೋದಿಕ್ಕೆ ಹೋಗ್ಬೇಡ. ಇನ್ನೇನಾದರೂ ಹೆಚ್ಚು ಕಡಿಮೆಯಾದರೆ ನಿನ್ನನ್ನು ಸುಮ್ನೆ ಬಿಡೋದಿಲ್ಲ’ ಎಚ್ಚರಿಕೆಯ ಮಾತುಗಳನ್ನು ಹೇಳಿ ರಸ್ತೆಗಿಳಿದ.

ಯೂನಿಫಾರಂನಲ್ಲಿದ್ದ ಇನ್ಸ್‌ಪೆಕ್ಟರ್‌ನನ್ನು ಕಂಡು ಕೆಲವರ ಕಣ್ಣುಗಳು ಅರಳಿದವು. ಕುತೂಹಲವೆನ್ನುವಂತೆ ದಾರಿಯಲ್ಲಿ ನಡೆದು ಹೋಗುತ್ತಿದ್ದ ಅವನನ್ನು ಕಂಡು ಗುಸುಗುಸು ಆರಂಭಿಸಿದರು.

ಇನ್ಸ್‌ಪೆಕ್ಟರ್ ಸ್ವಲ್ಪ ಮುಂದಕ್ಕೆ ಹೋಗಿ ಹಳೇಯ ಕಾಲದ ಕಟ್ಟಡದ ಕಡೆಗೆ ನೋಡಿದ. ಪಾಂಬು ಇನ್ನೂ ಮುತ್ತು ಚಾಂಡಿಯ ಜೊತೆಗೆ ಚರ್ಚೆ ನಡೆಸುತ್ತಿರುವುದು ಕಂಡಿತು. ನೇರವಾಗಿ ಅವರ ನಡುವೆ ನಿಲ್ಲುವ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ ಅವರ ಕಣ್ಣಿಗೆ ಗೋಚರವಾಗದಂತೆ ಸ್ವಲ್ಪ ಮುಂದಕ್ಕೆ ನಡೆದು ಅವರ ಚಲನವಲನವನ್ನು ಗಮನಿಸಿದ.


ಬಹಳ ಸಮಯದವರೆಗೂ ಅವರ ಚರ್ಚೆ ಮುಂದುವರಿಯಿತು. ಕೊನೆಗೆ ಮುತ್ತುಚಾಂಡಿಯೇ ಒಂದು ನಿರ್ಧಾರ ತೆಗೆದುಕೊಂಡವರಂತೆ ಇಳಿ ಬಿಟ್ಟಿದ್ದ ಪಟ್ಟೆ ಪಟ್ಟೆಯ ಲುಂಗಿಯನ್ನು ಮೊಣಗಂಟಿನಿಂದಲೂ ಮೇಲಕ್ಕೆ ಎತ್ತಿ ಕಟ್ಟಿ ಒಳಗೆ ನಡೆದ.

ಪಾಂಬುವಿನ ಮುಖದಲ್ಲಿ ನಿರಾಶೆ ಕಂಡಿತು. ಅವನು ಹೇಳಿದ ಯಾವುದೋ ಮಾತನ್ನು ಮುತ್ತುಚಾಂಡಿ ತಳ್ಳಿ ಹಾಕಿದಂತಿತ್ತು ಅವನ ಮುಖದ ಚೆಹರೆ.

## ಗಡಿಯಾರ ನಿಂತಾಗ

ತಾನೆ ಕಟ್ಟಿಸಿದ ಅರಮನೆಯಲ್ಲಿ
ಅರಸನ ಹಾಗೆ ಬೀಗುತ್ತಿದ್ದ
ಪಲ್ಲಂಗದಲ್ಲೆ ಪವಡಿಸುತ್ತಿದ್ದ!
ಗಡಿಯಾರದ ಮುಳ್ಳು ನಿಂತಾಗ
ಅರಮನೆಯಲ್ಲಿ ಸ್ಥಳವಿಲ್ಲ
ಅಂಗಳದಲ್ಲಿ ಅಂಗಾತವಾಗಿ
ಚಟ್ಟದ ಮೇಲಿದ್ದ!

★ ದೇವಕಿಸುತ




ಭಾರವಾದ ಹೆಜ್ಜೆಗಳೊಂದಿಗೆ ಕಟ್ಟಡದ ಕಾಂಪೌಂಡಿನಿಂದ ಹೊರಬಿದ್ದ. ಇನ್ಸ್‌ಪೆಕ್ಟರ್ ರಾಜಧಾನಿಯ ಊಹೆಯಂತೆಯೇ ಅವನು ತನ್ನ ಕಾರನ್ನೇರದೆ ನೇರವಾಗಿ ಪೆಟ್ಟಿಗೆ ಅಂಗಡಿಯತ್ತ ನಡೆದು ಬರುತ್ತಿದ್ದ. ರಾಜಧಾನಿ ಸ್ವಲ್ಪ ಹೊತ್ತು ಹಾಗೆಯೇ ನಿಂತ. ದಾರಿ ಹೋಕರ ಆಶ್ಚರ್ಯದ ನೋಟ ಅತ್ತವಿದ್ದರೂ ಪಾಂಬುವಿನ ಗಮನ ಅತ್ತ ಹರಿಯಲಿಲ್ಲ.

ಪಾಂಬು ನೇರವಾಗಿ ಅಂಗಡಿಗೆ ಬಂದು ನಿಂತ. ಅಂಗಡಿಯವನ ಮುಖದಲ್ಲಿ ಪೈಶಾಚಿಕ ಭೀತಿ ಆವರಿಸಿತ್ತು. ಅವನು ಪಾಂಬುವಿನ ಜೊತೆಗೆ ಮಾತನಾಡುವುದು ಕೂಡ ಅಪಾಯವೆಂದು ತಿಳಿದು ಅವನನ್ನು ನೋಡಿಯೂ ನೋಡದವರಂತೆ ಮುಖ ಹಿಂಡಿದ.

‘ಮಾಮೂ, ಒಂದು ಪ್ಯಾಕೆಟ್ ಸಿಗರೇಟು ಕೊಟ್ಬಿಡು’ ನೋಟನ್ನು ಮುಂದಕ್ಕೆ ಚಾಚುತ್ತಾ ಕೇಳಿದ. ಅಧಿಕಾರಿ ಅಲ್ಲಿಂದ ಹಿಂತಿರುಗಿ ಜೀಪಿನ ಬಳಿ ನಡೆದ. ಜೀಪಿನ ಬಳಿಯಿಂದ ಅವರಾಡುತ್ತಿದ್ದ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಟಾಕಿಯ ವಾಲ್ಯೂಮನ್ನು ಮೆಲ್ಲಗೆ ಮಾಡಿದ್ದ.

‘ಆಗ ಯಾಕೆ ಅಂಗಡಿಗೆ ಬಂದಿಲ್ಲ ನೀನು? ಯಾವತ್ತೂ ನೀನು ಇಲ್ಲಿಂದ ಸಿಗರೇಟು ಖರೀದಿಸದೆ ಹೋಗುತ್ತಿರಲಿಲ್ಲವಲ್ಲವೆ? ಏನು ಅಂತಹ ಆತುರ?’ ಅತೀ ಮೆತ್ತಗಿನ ದನಿಯಲ್ಲಿ ಕೇಳಿದ.

‘ಏನೋ ತಲೆ ಹೋಗುವ ವ್ಯವಹಾರಕ್ಕೆ ತಲೆಯೊಡ್ಡಿಕೊಂಡಿದ್ದೇನೆ. ಅದಕ್ಕೆ ಮರ್ತು ಬಿಟ್ಟೆ. ಅದಿಲ್ಲದೆ ನಾನು ಹೋದ ಕೆಲ್ಸನೂ ಸರಿಯಾಗಿಲ್ಲ’ ಎತ್ತರದ ದನಿಯಲ್ಲಿ ಹೇಳುವಾಗ ಅಂಗಡಿಯಾತನ ಎದೆ ಜೋರಾಗಿ ಡವಗುಟ್ಟುತ್ತಿತ್ತು.

ಅಂಗಡಿಯಾತ ಸಿಗರೇಟಿನ ಪ್ಯಾಕೇಟ್ ಅವನ ಕೈಗಿತ್ತು ಹಣ ಎಣಿಸಿಕೊಂಡ.

‘ಯಾಕೆ, ಏನು ವಿಷ್ಯ? ಮುತ್ತುಚಾಂಡಿ ನಿನ್ನ ಬೈದನೆ?’ ಸುಮ್ಮನೆ ಕೆಣಕುವುದಕ್ಕೆ ಕೇಳಿದ ಅಂಗಡಿಯಾತ. ಪಾಂಬುವಿನ ಮುಖದಲ್ಲಿ ಮತ್ತಷ್ಟು ಗಾಢವಾದ ನಿರಾಶೆ ತುಂಬಿರುವುದು ಕಂಡಿತು. ಮಾತಿಗೆ ತಕ್ಷಣವೇ ಉತ್ತರಿಸದೆ ಬೆಂಕಿಕಡ್ಡಿ ಹಚ್ಚಿ ಸಿಗರೇಟಿಗೆ ಸೋಕಿಸಿದ. ಅದು ಉರಿಯುತ್ತಲೇ ಎರಡು ಧಂ ಎಳೆದು ಹೊಗೆ ಕಾರಿದ.

‘ಎಲ್ಲಾ ನನ್ನ ಹಣೆಬರಹ. ಕೆಲ್ಸದವರು ಸರಿಯಾಗಿ ಕಡಲಿಗೆ ಇಳಿಯುವುದಿಲ್ಲ. ವ್ಯವಹಾರನೂ ನಷ್ಟದಲ್ಲಿ ನಡೀತಿದೆ. ಇತ್ತ ಇನ್ಸ್‌ಪೆಕ್ಟರ್ ನನ್ನ ಬೆನ್ನ ಹಿಂದೆ ಬಿದ್ದಿದಾನೆ’ ಗೊಣಗಿಕೊಂಡ.

‘ಅರೆ! ನೀನು ಇನ್ಸ್‌ಪೆಕ್ಟರ್‌ಗೆ ಏನು ಕೆಲಸ ಮಾಡಿಕೊಡುತ್ತೇನೆಂದು ಭರವಸೆಯನ್ನು ನೀಡಿದ್ದೀಯಾ?’ ಅವನ ವ್ಯವಹಾರ ಚತುರತೆಯನ್ನು ಕಂಡು ಕೇಳಿದ ಅಂಗಡಿಯಾತ.

ಪಾಂಬು ನಿಟ್ಟುಸಿರಿಟ್ಟ.

‘ಅದಲ್ಲಾ, ನಿನ್ನತ್ರ ಹೇಳೋದಾದ್ರೆ ಒಂದೆರಡು ದಿನ ಸಾಕಾಗೊಲ್ಲ ಮಾಮು. ಆ ಇನ್ಸ್‌ಪೆಕ್ಟರ್‌ಗೆ ಕೆಲಸ ಆಗ್ಬೇಕಾದ್ರೆ ನನ್ನ ಹುಡುಕಿಕೊಂಡು ಬರ್ತಾನೆ. ಆನಂತರ ನನ್ನ ಪರಿಚಯನೇ ಇರೋಲ್ಲ. ನಾನು ನನ್ನ ಕೆಲಸಗಾರರ ಬಗ್ಗೆ ಕಂಪ್ಲೆಂಟ್ ಕೊಟ್ರೆ ಕೇಸನ್ನೂ ಡೀಲ್ ಮಾಡದ ಮನುಷ್ಯ ಅವ್ನು’ ಕ್ಯಾಕರಿಸಿ ಉಗುಳಿದ.

ಇನ್ಸ್‌ಪೆಕ್ಟರ್ ರಾಜಧಾನಿಯ ಮುಖ ಬಿಳಚಿಕೊಂಡಿತು. ಅದನ್ನು ಗಮನಿಸಿದ ಮಾಮು ಉಗುಳು ನುಂಗಿಕೊಂಡ.

‘ನೀನು ಈ ತರ ಇನ್ಸ್‌ಪೆಕ್ಟರ್ ಬಗ್ಗೆ ಹಗೂರವಾಗಿ ಮಾತಾಡ್ಬೇಡ. ನಿಯತ್ತಿನ ಜನ ಪೊಲೀಸ್ನೋರು. ಮಾತಾಡೋವಾಗ ಗೌರವ ಕೊಡೋದನ್ನ ಕಲಿ’ ಬುದ್ಧಿಮಾತನ್ನು ಹೇಳಿದಾಗ ಪಾಂಬುವಿನ ತಲೆ ಚಿಟ್ಟು ಹಿಡಿದಂತಾಯಿತು. ಸಿಗರೇಟಿನ ಹೊಗೆಯನ್ನು ಉಗುಳುವುದಕ್ಕೂ ಮರೆತು ಕುಡಿದು ಬಿಟ್ಟ. ಕೆಮ್ಮು ಗಂಟಲನ್ನು ತಬ್ಬಿ ಹಿಡಿಯಿತು. ಎರಡು ನಿಮಿಷಗಳಲ್ಲಿ ಸುಧಾರಿಸಿಕೊಂಡವನು ಗಂಟಲನ್ನು ಸರಿಪಡಿಸಿಕೊಂಡ.

‘ನಾನೇನು ಹೇಳ್ದೆ? ಇನ್ಸ್‌ಪೆಕ್ಟರ್ ಬಗ್ಗೆ ಗೌರವದಿಂದಲೇ ಮಾತಾಡಿದ್ದೀನಿ. ನಾನಿಲ್ದೆ ಇನ್ಸ್‌ಪೆಕ್ಟರ್‌ನ ಕೆಲಸ ಆಗೋದಿಲ್ಲಂತನೂ ಹೇಳ್ತೀನಿ. ಅದೂ ಮುತ್ತುಚಾಂಡಿಯ ಸಹಕಾರ ಇದ್ರೆ ಮಾತ್ರ’

‘ಮುತ್ತುಚಾಂಡಿ ನಿನಗೆ ಸಹಾಯ ಮಾಡೋದಿಲ್ಲಾಂತ ಹೇಳಿದ್ನಾ?’ ಮಾಮೂವಿನ ಪ್ರಶ್ನೆಗೆ ಅಡ್ಡಲಾಗಿ ತಲೆಯಾಡಿಸಿದ.

‘ಇಲ್ಲ, ಹಾಗಂದಿಲ್ಲ. ನಾನು ಪೊಲೀಸರ ಜೊತೆಗೆ ಆಟ ಆಡ್ತಿದ್ದೀನಿಂತ ಅವನು ನನ್ನ ಎಚ್ಚರಿಸ್ದ. ಸುಮ್ನೆ ಅವರನ್ನ ಎದುರು ಹಾಕಿಕೊಳ್ಬೇಡ ಅಂತಾನೆ. ನಾನೇನು